


ಚೀನಾದಲ್ಲಿ ಇತ್ತೀಚೆಗೆ ಖಾರವಾದ ಮೆಣಸಿನಕಾಯಿಗಳನ್ನು ತಿನ್ನುವ ಸ್ಪರ್ಧೆ ನಡೆಯಿತು. ಶಿಸ್ತಾಗಿ ಕುರ್ಚಿಯಲ್ಲಿ ಕೂತು ತಿನ್ನುವ ಬದಲು ಈ ರೀತಿ ಮೆಣಸಿನಕಾಯಿ ಕೆರೆಯಲ್ಲಿ ಮುಳುಗಿಕೊಂಡು ತಿಂದರೆ.. ಬಾಯಿ ಮಾತ್ರ ಖಾರಕ್ಕೆ ಪ್ರತಿಕ್ರಿಯೆ ನೀಡಿದರೆ ಸಾಲದು ಎಂಬುದು ಆಯೋಜಕರ ಹುನ್ನಾರವಿರಬಹುದು.

ಥಾಯ್ಲೆಂಡ್‌ನಲ್ಲಿ ಮನೆಯೊಂದರ ಮಲಗುವ ಕೊಠಡಿಗೆ ನುಸುಳಿದ ಹಾವೊಂದು ಮನೆಯ ಯಜಮಾನತಿಯ ನೈಟಿಯನ್ನು ನುಂಗಿತಂತೆ. ಅದು ಅಷ್ಟು ಅಮೂಲ್ಯ ಎಂದು ಹಾವಿಗೆ ಎನಿಸಿತೋ ಗೊತ್ತಿಲ್ಲ. ಆದರೆ ಯಜಮಾನ ಮಾತ್ರ ಹೆಂಡತಿಯಿಂದ ಬೈಸಿಕೊಳ್ಳುವುದರಿಂದ ಪಾರಾಗಲು ಹಾವಿನ ಬಾಯಿಯ ಹೊರಗೆ ಇಣುಕುತ್ತಿದ್ದ ನೈಟಿಯ ತುದಿ ಹಿಡಿದು ಹೊರಗೆ ಎಳೆದು ಹಾಕಿದನಂತೆ.



ನ್ಯೂಯಾರ್ಕ್‌ನಲ್ಲಿ 'ರಿಪ್ಲೇಸ್ ಬಿಲೀವ್ ಇಟ್ ಆರ್ ನಾಟ್'ನಲ್ಲಿ ಈ ರೀತಿ ಪ್ರದರ್ಶನಕ್ಕಿಟ್ಟಿದ್ದು ಕೈ ಉಗುರುಗಳು. ಭಾರತದ 82 ವರ್ಷದ ವಯೋವೃದ್ಧ ಶ್ರೀಧರ್ ಚಿಲ್ಲಾಳ್ ಕಳೆದ 66 ವರ್ಷಗಳ ಕಾಲ ಜತನದಿಂದ ಬೆಳೆಸಿದ ಉಗುರುಗಳು ಪ್ರದರ್ಶನದ ಪೆಟ್ಟಿಗೆ ಸೇರಿವೆ. ಉಗುರುಗಳ ಒಟ್ಟು ಉದ್ದ 909.6 ಸೆಂ.ಮೀ. ಅಂತೆ. ನ್ಯೂಯಾರ್ಕ್‌ನಲ್ಲಿ ಉಗುರು ಕತ್ತರಿಸುವ ಸಮಾರಂಭ ಮಾಡಿಸಿಕೊಂಡ ದಾಖಲೆಯೂ ಅವರ ಹೆಸರಿಗೆ ಸೇರಿದೆ.



ಅನ್ಯಗ್ರಹ ಜೀವಿಯಂತೆ ಈ ರೀತಿ ಕವಚ ತೊಟ್ಟು ಓಡಾಡುತ್ತಿರುವ ವ್ಯಕ್ತಿ ಫ್ರೆಂಚ್ ಕಲಾವಿದ ಅಬ್ರಹಾಂ ಪೋಯಿನ್‌ಶೆವಲ್. ಫ್ರಾನ್ಸ್‌ನಲ್ಲಿ ಈ ಕವಚ ತೊಟ್ಟೇ 170 ಕಿ.ಮೀ. ಓಡಾಡುವ ಇರಾದೆಯಂತೆ ಈ ಕಲಾವಿದನಿಗೆ. ಏನನ್ನಾದರೂ ಸಾಧಿಸು ಎಂಬ ತಂದೆ– ತಾಯಿಯ ಮಾತನ್ನು ಈ ರೀತಿ ಪಾಲಿಸಲು ಹೋಗಬಾರದಿತ್ತು.

ಚೀನಾದ ಲಾವೊಜುನ್ ಪರ್ವತದ ಅಂಚಿನಲ್ಲಿ ಇತ್ತೀಚೆಗೆ ಭೋಜನಕೂಟ ಏರ್ಪಡಿಸಲಾಗಿತ್ತಂತೆ. ಸಮುದ್ರ ಮಟ್ಟದಿಂದ 2000 ಅಡಿಗಳಷ್ಟು ಎತ್ತರದಲ್ಲಿ ಪ್ರವಾಸಿಗರು ಭೋಜನ ಸವಿದರು. ಸವಿದ ಭೋಜನ ಹೊಟ್ಟೆಯೊಳಗಿಂದ ವಾಪಸ್ಸು ಬರಲು ಕಾತರಿಸಿದರೂ ಅಷ್ಟೆತ್ತರದಿಂದ ಎಂದು ದಾಖಲೆಯಾಗಬಹುದು.



ದೆಹಲಿಯಲ್ಲಿ ಕಳವು ಮಾಡಲು ಬಂದಿದ್ದ ಕಳ್ಳನೊಬ್ಬ ಕುಣಿಯುತ್ತಿರುವ ದೃಶ್ಯ ಸಿಸಿ ಟಿವಿಯಲ್ಲಿ ಸೆರೆಯಾಗಿದ್ದು ವಿಡಿಯೊ ವೈರಲ್ ಆಗಿದೆ. ಕಳವು ಮಾಡುವ ಮೊದಲೇ ಆತ ಕುಣಿಯಲು ಆರಂಭಿಸಿದನಂತೆ. ನಂತರ ಕುಣಿದಿದ್ದರೆ ಅದಕ್ಕೊಂದು ಅರ್ಥ ಕಲ್ಪಿಸಬಹುದಿತ್ತು.